(ಗೊಂದಲ)

ಶ್ರೀ ಜಿ. ರಾಮಕೃಷ್ಣ:– ನೀವು ಸಹ ನೀರಾವರಿ ಮಂತ್ರಿಗಳು ಆಗಿದ್ದೀರಲ್ಲವೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ:– ನಾನು ಕೂಡ ಬಹಳ ಪ್ರಯತ್ನ ಮಾಡಿದ್ದೇನೆ. ಇನ್ನೂ ಪ್ರಯತ್ನ ಜಾಸ್ತಿ ಬೇಕು ಎಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಹಾಸನ ಎಂದರೆ ಪುಟ್ಟಸ್ವಾಮಿಗೌಡರು ಹಾಗೂ ಹನುಮೇಗೌಡರೂ ನಿಲ್ಲಬೇಕೇ ?

ಉಪಾಧ್ಯಕ್ಷಿಣಿಯವರು:– ನೀವು ಏಕೆ ಇವರ ಮಧ್ಯೆ ನಿಲ್ಲಬೇಕು ?

ಶ್ರೀ ವಾಟಾಳ್ ನಾಗರಾಜ್:– ನಾನು ಸಹಾಯ ಮಾಡುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಈ 13 ಜನ ಕೆಲಸ ತೆಗೆದುಕೊಂಡು ಸುಮಾರು 10 ವರ್ಷ ಆಯಿತು. ಇವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಬೇಕು. 13ಜನ ಟೆಂಡರ್ ಮೇಲೆ ಕೆಲಸ ತೆಗೆದುಕೊಂಡು ಕೆಲಸ ಮಾಡದೇ ಅವರಿಂದ ಅನಾನುಕೂಲ ಆಗಿದೆ ಎಂದು ಉತ್ತರದಲ್ಲಿ ಅಚ್ಚಾಗಿದೆ. ಅಂತಹ ಟೆಂಡರ್‌ದಾರರು 10 ವರ್ಷಗಳಿಂದ ಕೆಲಸ ಮಾಡಿಲ್ಲ. ಆದ್ದರಿಂದ ಶೀಘ್ರವಾಗಿ ಕ್ರಮವನ್ನು ಕೈಗೊಂಡು ಆ ಕೆಲಸವನ್ನು ಪೂರ್ತಿ ಮಾಡತಕ್ಕದ್ದರ ಬಗ್ಗ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಅದಕ್ಕಾಗಿ ನಾವು ನಿಯಮಾವಳಿ ಪ್ರಕಾರ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಹೊಸದಾಗಿ ಕೆಲಸವನ್ನು ಎಂಟ್ರಸ್ಟ್ ಮಾಡಿದ್ದೇವೆ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡೇ ಜೂನ್ 1993ರೊಳಗೆ ಈ ಕಾಮಗಾರಿಯನ್ನು ಮಾಡಿಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಪುಟ್ಟಸ್ವಾಮಿಗೌಡರು ಸಂಬಂಧಪಟ್ಟ ಖಾತೆಯ ಮಂತ್ರಿಗಳಾಗಿದ್ದವರು. ಅವರ ಕಾಲದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಉಪಾಧ್ಯಕ್ಷಿಣಿಯವರು:– ಈಗ ಅವರು ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ:– ಅವರ ಅವಧಿಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ತಿಳಿಸಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ನಾನು ಕ್ರಮ ತೆಗೆದುಕೊಂಡಿದ್ದೇನೆ, ಈಗ ಆದಷ್ಟು ಬೇಗ ಮಾಡಿ ಎಂದು ಹೇಳುತ್ತಿದ್ದೇನೆ.

ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರಿಂದ ಸಸಿಗಳನ್ನು ನೆಡುವುದಕ್ಕೆ ಸಂಬಂಧಿಸಿದ ವೆಚ್ಚ.

(301) ಶ್ರೀ ಬಸವಂತರೆಡ್ಡಿ, ಮೋತಕಪಲ್ಲಿ (ಸೇಡಂ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಅರಣ್ಯ ಇಲಾಖೆಯವರು ಮುದೋಳ ಗ್ರಾಮದ

ಎರಡೂ ಕೆರೆಗಳಲ್ಲಿ 1985–86ರ ಸಾಲಿನಲ್ಲಿ ಗಿಡಗಳನ್ನು ನೆಡಲು ವೆಚ್ಚ ಮಾಡಿದ ಮೊತ್ತವೆಷ್ಟು ?

ಆ) ಆದರಿಂದ ಇಲ್ಲಿಯವರೆಗೆ ಬಂದಿರುವ ಆದಾಯವೆಷ್ಟು ?

ಇ) ಸೇಡಂ ತಾಲ್ಲೂಕಿನ ಅರಣ್ಯ ಇಲಾಖೆಯವರು ಕಟ್ಟಿಗೆಗಳನ್ನು ಯಾವ ಪರವಾನಗಿಯೂ ಇಲ್ಲದೇ ಮಾರಾಟ ಮಾಡಿ ವ್ಯವಹಾರ ಮಾಡಿದ್ದು ನಿಜವಲ್ಲವೇ ?

ಈ) ನಿಜವಿದ್ದಲ್ಲಿ ವಿಚಾರಣೆ ಮಾಡಿಸಿ ಭ್ರಷ್ಟ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು)

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಮುಧೋಳ್ ಗ್ರಾಮದ ಎರಡು ಕೆರೆಗಳಲ್ಲಿ 1985–86ನೇ ಸಾಲಿನಲ್ಲಿ ಯಾವುದೇ ಗಿಡಗಳನ್ನು ನೆಟ್ಟಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಿಂದ ಪರವಾನಿಗೆ ಇಲ್ಲದೆ ಕಟ್ಟಿಗೆ ಮಾರಾಟ ಮಾಡಿರುವುದಿಲ್ಲ. 1988ರಲ್ಲಿ ಸದರಿ ನೆಡುತೋಪುಗಳಲ್ಲಿ ಅನಧಿಕೃತ ಕಡಿತಲೆ ಸುತ್ತಲ ಗ್ರಾಮಗಳಲ್ಲಿನ ಜನರಿಂದ ಕಂಡು ಬಂದಿದ್ದು ಇದರ ಬಗ್ಗೆ ವಿಚಾರಣೆ ನಡೆಸಲು ಅರಣ್ಯ ಸಂರಕ್ಷಣಾಧಿಕಾರಿ, ಗುಲ್ಬರ್ಗಾ ಇವರು ಆದೇಶ ನೀಡಿದ್ದು, ವಿಚಾರಣೆಯೂ ಪ್ರಗತಿಯಲ್ಲಿದೆ.

ಈ) ಈ ಬಗ್ಗೆ ವಿಚಾರಣೆ ಮುಗಿದ ನಂತರ ತಪ್ಪಿತಸ್ಥ ಸಿಬ್ಬಂದಿಯವರ ಮೇಲೆ ಯಾವುದೇ ಅವ್ಯವಹಾರ ವರದಿಯಾದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನ 'ಅ' ಪ್ರಶ್ನೆಗೆ ಉತ್ತರವಾಗಿ ಯಾವುದೇ ಗಿಡಗಳನ್ನು ನೆಟ್ಟಿರುವುದಿಲ್ಲವೆಂದು ತಿಳಿಸಿದ್ದಾರೆ. 'ಇ' ಪ್ರಶ್ನೆಗೆ ಉತ್ತರವಾಗಿ ಅರಣ್ಯ ಇಲಾಖೆಯಿಂದ ಪರವಾನಗಿ ಇಲ್ಲದೆ ಕಟ್ಟಿಗೆ ಮಾರಾಟ ಮಾಡಿರುವುದಿಲ್ಲ. 1988ರಲ್ಲಿ ಸದರಿ ನೆಡುತೋಪುಗಳಲ್ಲಿ ಅನಧಿಕೃತ ಕಡಿತಲೆ ಸುತ್ತಲ ಗ್ರಾಮಗಳಲ್ಲಿನ ಜನರಿಂದ ಕಂಡುಬಂದಿದ್ದು, ಇದರ ಬಗ್ಗೆ ವಿಚಾರಣೆ ನಡೆಸಲು ಅರಣ್ಯ ಸಂರಕ್ಷಣಾಧಿಕಾರಿ, ಗುಲ್ಬರ್ಗಾ ಇವರು ವಿಚಾರಣೆಗಾಗಿ ಆದೇಶ ನೀಡಿದ್ದು ವಿಚಾರಣೆಯೂ ಪ್ರಗತಿಯಲ್ಲಿದೆ ಎಂದು ತಿಳಿಸಲಾಗಿದೆ. ಈ ವಿಚಾರಣೆ ಎಷ್ಟು ವರ್ಷಗಳಿಂದ ನಡೆದಿದೆ ? ನೆಡುತೋಪುಗಳನ್ನು ಅನಧಿಕೃತವಾಗಿ ಕಡಿದಿದ್ದು ಎಲ್ಲಿ. ಇದೇ ಕೆರೆಗಳಲ್ಲಿ ಅಲ್ಲವೇ ? ಈ ಕೆರೆಗಳು ಮುಧೋಳ್ ಗ್ರಾಮಕ್ಕೆ ಹತ್ತಿರ ಇದ್ದರೂ ಸಹ ಅರಣ್ಯ ಇಲಾಖೆಯವರು ನಿಗಾ ಮಾಡಿಲ್ಲ ಏಕೆ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ಮಾನ್ಯ ಸದಸ್ಯರು 1985–86ರಲ್ಲಿ ಎಷ್ಟು ಗಿಡಗಳನ್ನು ನೆಟ್ಟಿದ್ದಾರೆ ಎಂದು ಪ್ರಶ್ನೆ ಕೇಳಿದ್ದಾರೆ. ಆ ಪ್ರದೇಶದಲ್ಲಿ ಈ ಎರಡು ಕೆರೆಗಳಲ್ಲಿ ನಡೆದಿದ್ದು 1983–84ರಲ್ಲಿ. ಕೇಂದ್ರ ಯೋಜನೆಯಲ್ಲಿ 8 ಹೆಕ್ಟೇರ್ ಸ್ಥಳದಲ್ಲಿ 20 ಸಾವಿರ ಗಿಡಗಳು, ಇದಕ್ಕೆ 23,600 ರೂಪಾಯಿ ವೆಚ್ಚವಾಗಿದೆ. ರಾಮ ಕೆರೆಯಲ್ಲಿ 12 ಹೆಕ್ಟೇರ್ ಸ್ಥಳದಲ್ಲಿ 30 ಸಾವಿರ ಗಿಡಗಳು, ಇದಕ್ಕೆ 41 ಸಾವಿರ ರೂಪಾಯಿ ವೆಚ್ಚ ಆಗಿದೆ. ಒಟ್ಟು 20 ಹೆಕ್ಟೇರ್ ಸ್ಥಳದಲ್ಲಿ 50 ಸಾವಿರ ಗಿಡಗಳು ಆಗಿವೆ. ಇದಕ್ಕೆ ಒಟ್ಟು 64,600 ರೂಪಾಯಿ ವೆಚ್ಚವಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಎರಡು ಕೆರೆಗಳಲ್ಲಿ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ 55–60 ಎಕರೆ ಭೂಮಿಯಲ್ಲಿ ಸುಮಾರು 55 ಸಾವಿರ ನೆಡುತೋಪುಗಳು ಅಂದರೆ ಜಾಲಿ ಗಿಡಗಳನ್ನು ಹಚ್ಚಿ 4–5 ವರ್ಷಗಳ ನಂತರ, ಈ ಗಿಡಗಳು ನೇಗಲು, ಕುಂಟೆ, ಈಚು ಹಾಗೂ ನೊಗ ಇತ್ಯಾದಿಗಳಿಗೆ ಬರಲು ಯೋಗ್ಯವಾಗಿ ಪ್ರತಿ ಗಿಡಕ್ಕೆ 50 ರೂಪಾಯ ಆದರೂ ಸಹ

ಸುಮಾರು 26–27 ಲಕ್ಷ ರೂಪಾಯಿಗಳನ್ನು ದುರುಪಯೋಗ ಮಾಡಿದಂತಾಗಿಲ್ಲವೇ ? ಒಂದು ವೇಳೆ ಆಗಿದ್ದರೆ ಇಂತಹ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಏಕೆ ವಿಚಾರ ಮಾಡಬಾರದು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಇದು ನಡೆದಿದ್ದು 1987ರಲ್ಲಿ. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬರುವಾಗ ಈ ಕ್ಷೇತ್ರ ಜಿಲ್ಲಾ ಪರಿಷತ್ತಿನ ಅಡಿಯಲ್ಲಿ ಹೋಗಿ ಅವರು ನೋಡುತ್ತಿದ್ದರು. ಆದರೆ ಏನಾಯಿತು ಅಂದರೆ ಆ ಊರಿನ ಜನರು ಜಾಲಿ ಗಿಡಗಳು. ಹಕ್ಕಿಪಕ್ಷಿಗಳಿಗೆ ಆಶ್ರಯ ನೀಡಿ ಕೊಳದಲ್ಲಿನ ಬೆಳೆಗಳನ್ನು ಹಾಳು ಮಾಡುತ್ತವೆಂಬ ಭಾವನೆಯಿಂದ ಆ ಮರಗಳನ್ನೆಲ್ಲಾ ಕಡಿದು ಹತ್ತು ಗಾಡಿ ಕಟ್ಟಿಗೆಗಳನ್ನು ಅವರು ಒಯ್ದು ಹೋದರು. ಅದರಲ್ಲಿ ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಕೈವಾಡ ಇರಲಿಲ್ಲ. ಆದರೆ ಅವತ್ತು ರೇಂಜ್ ಆಫೀಸರ್‌ರವರು ಈ ವಿಷಯವನ್ನು ಮುಖ್ಯ ಅಧಿಕಾರಿಗಳಿಗೆ ತಿಳಿಸದಿದ್ದ ಕಾರಣ ಅವರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆ.

ಗಡಿ ಪ್ರದೇಶದ ಅಭಿವೃದ್ಧಿಗೆ ಸರ್ಕಾರದ ಕ್ರಮ

412 ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಗಡಿ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಗಡಿ ಪ್ರದೇಶಗಳ ಅಭಿವೃದ್ಧಿಗಾಗಿ ರಸ್ತೆ ಮತ್ತು ಸೇತುವೆಗಳು ಶಿಕ್ಷಣ, ಜನಾರೋಗ್ಯ ಪಶುವೈದ್ಯ, ಗ್ರಾಮೀಣ ವಿದ್ಯುದೀಕರಣ ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಇವೇ ಮೊದಲಾದ ಆದ್ಯತಾ ವಲಯಗಳಲ್ಲಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಗಡಿ ತಾಲ್ಲೂಕುಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಹಾಗೂ ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ 1990–91ನೇ ಸಾಲಿನಿಂದ ಪ್ರತ್ಯೇಕವಾಗಿ ಹಣವನ್ನು ಒದಗಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷಿಣಿಯವರೆ, ಕರ್ನಾಟಕ ರಾಜ್ಯದಲ್ಲಿ ಗಡಿ ಪ್ರದೇಶದ ತಾಲ್ಲೂಕುಗಳ ಅಭಿವೃದ್ಧಿಯ ಬಗ್ಗೆ ಒಂದು ವಿಶೇಷವಾದಂತಹ ಯೋಜನೆಯನ್ನು ತಯಾರು ಮಾಡಿ, ಆ ತಾಲ್ಲೂಕುಗಳ ಬೆಳವಣಿಗೆಯ ಬಗ್ಗೆ ಸರ್ಕಾರ ಹೊಸ ಯೋಜನೆ ತಯಾರು ಮಾಡಬೇಕೆಂದು ಹೇಳಿ, ಇದಕ್ಕಾಗಿ ಗಮನವನ್ನು ಕೊಡಬೇಕೆಂದು ಹೇಳಿ ಈ ಸರ್ಕಾರ ಪ್ರಾರಂಭ ಆದ ತಕ್ಷಣ ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರು ಇದ್ದಾಗ ಈ ಬಗ್ಗೆ ನಾವು ಒತ್ತಾಯ ತಂದಾಗ ಅವರು ಇದಕ್ಕೆ ಪ್ರಪ್ರಥಮವಾಗಿ ಈ ಯೋಜನೆಯನ್ನು ನಾನು ಕೈಗೆತ್ತಿಕೊಳ್ಳುತ್ತೇನೆಂದು ಹೇಳಿ ಈ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೋಸ್ಕರವಾಗಿ 5 ಕೋಟಿ ರೂಪಾಯಿಗಳನ್ನು ಇಟ್ಟರು. ನಂತರ ಸ್ವಲ್ಪ ಜಾಸ್ತಿಯಾಗಿದೆ. ನಾನು ಮುಖ್ಯಮಂತ್ರಿಗಳಲ್ಲಿ ಕೇಳತಕ್ಕ ಪ್ರಶ್ನೆ ಏನೆಂದರೆ, ಅವರು ಕನ್ನಡದ ಬಗ್ಗೆ ಮತ್ತು ಗಡಿ ನಾಡಿನ ಬಗ್ಗೆ ಅಪಾರ ಕಳಕಳಿಯನ್ನು ಇಟ್ಟುಕೊಂಡಿರತಕ್ಕ ಮುಖ್ಯಮಂತ್ರಿಗಳು. ಕರ್ನಾಟಕ ಏಕೀಕರಣ ಆದ ನಂತರ ಗಡಿ ಪ್ರದೇಶಗಳು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿವೆ. ಈ ಗಡಿ ಪ್ರದೇಶಗಳ ಬೆಳವಣಿಗೆ ಬಗ್ಗೆ ಇವೊತ್ತಿನವರೆವಿಗೂ ಬಂದಂಥ ಎಲ್ಲಾ ಸರ್ಕಾರಗಳು ಕೂಡ ಸಂಪೂರ್ಣವಾಗಿ ಕಡೆಗಣಿಸಿವೆ. ಆದುದರಿಂದ, ಇದರ ಬಗ್ಗೆ ಒಂದು ವಿಶೇಷವಾದಂಥ ಯೋಜನೆಯನ್ನು ತಯಾರು ಮಾಡಿ, ಈ ಯೋಜನೆಗೆ ಹೆಚ್ಚಿನ ರೀತಿಯಲ್ಲಿ ಗಮನ ಹರಿಸಬೇಕು. ಈಗ ನನಗೆ ತಿಳಿದಿರುವ ಮಟ್ಟಿಗೆ 15 ಕೋಟಿ ರೂಪಾಯಿಗಳನ್ನು ಗಡಿ ಪ್ರದೇಶದ ಅಭಿವೃದ್ಧಿಗಾಗಿ ಕೊಡುತ್ತಿದ್ದೀರಿ. ಈ ಗಡಿ ಪ್ರದೇಶದ ಅಭಿವೃದ್ಧಿ ಯೋಜನೆಯಡಿಯಲ್ಲಿ 52